ಓ ಎಸ್ ನಂ.68/2024
ಪಿ.ಡಬ್ಲು- 1
ಚಂದ್ರಕಾಂತ ತಂದೆಃ ದತ್ತಾತ್ರೇಯ ಕುಲಕರ್ಣಿ

**ಇಂದು ದಿನಾಂಕಃ24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎನ್ ಪಿ ವಕೀಲರಿಂದ.**

ನಾವು ಅಣ್ಣ-ತಮ್ಮಂದಿರು ನಮ್ಮ ತಂದೆ ತೀರಿದ ನಂತರ 1997 ರಲ್ಲಿ ವಿಭಾಗವಾಗಿರುತ್ತೇವೆ. ಸದರಿ ವಿಭಾಗದಲ್ಲಿ ಬಂದ ಆಸ್ತಿಗಳು ನಮ್ಮ ನಮ್ಮ ಸ್ವಾಧೀನದಲ್ಲಿ ಇರುತ್ತವೆ ಎಂದರೆ ಸರಿ.

2. ಈ ದಾವೆಯನ್ನು 1-25 ಹಳೆಯ ನಂಬರ 19 ರ ಆಸ್ತಿಯ ಕುರಿತು ಸಲ್ಲಿಸಿರುತ್ತೇನೆ. ಸಾಕ್ಷಿ ದೇವಸ್ಥಾನ ಕೇಸು ನಡೆದಿದ್ದರಿಂದ ದಾವಾ ಆಸ್ತಿಯನ್ನು ಮೊದಲು ಪಾಲು ಮಾಡಿಕೊಂಡಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಚಕ್ಕಬಂದಿ ನನಗೆ ಗೊತ್ತು. ಪೂರ್ವಕ್ಕೆ ಭಾಗ್ಯವಂತಿ ದೇವಸ್ಥಾನ, ಪಶ್ಚಿಮಕ್ಕೆ ಸುಭಾಷ ಹಂಚಿನಾಳರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಮ್ಮದೇ ಹಳೆ ಮನೆ ಇರುತ್ತದೆ.

3. ದೇವಸ್ಥಾನದವರು 1998-1999 ರಲ್ಲಿ ದಾವೆ ಹಾಕಿದ್ದರು. ಸದರಿ ದಾವೆಯ ಸಂಖ್ಯೆ ನನಗೆ ಹೇಳಲು ನೆನಪಿಲ್ಲ. ದೇವಸ್ಥಾನದವರು 1ನೇ ಪ್ರತಿವಾದಿ ರಮಾಕಾಂತರವರ ಮೇಲೆ ಕೇಸ ಹಾಕಿದ್ದರು. ದಾವಾ ಆಸ್ತಿ ಈಗ 1ನೇ ಪ್ರತಿವಾದಿ ರಮಾಕಾಂತರವರ ಸ್ವಾಧೀನದಲ್ಲಿ ಇರುತ್ತದೆ. ಪಂಚಾಯತಿಯಲ್ಲಿ ಕೂಡಾ ರಮಾಕಾಂತರವರ ಹೆಸರು ಇದೆ ಎಂದರೆ ಸರಿ. ದಾವಾ ಆಸ್ತಿಯ ತೆರಿಗೆಯನ್ನು ರಾಮಕಾಂತರವರೆ ತುಂಬುತ್ತಾರೆ ಎಂದರೆ ಸರಿ. ದಾವಾ ಜಾಗೆಯಲ್ಲಿ ಈಗ ಸುಮಾರು 15 ಅಂಗಡಿಗಳು ಇರುತ್ತವೆ. ರಮಾಕಾಂತರವರು ಸದರಿ ಅಂಗಡಿಗಳನ್ನು ಹಾಕಲು ಜಾಗೆ ಬಾಡಿಗೆಗೆ ನೀಡಿರುತ್ತಾರೆ. ಬಾಡಿಗೆಯನ್ನು ರಮಾಕಾಂತರವರೆ ತೆಗೆದುಕೊಳ್ಳುತ್ತಾರೆ. ಬಾಡಿಗೆದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೆವೆ.

4. ನಾನು 7-8 ವರ್ಷಗಳಿಂದ ದಾವಾ ಆಸ್ತಿಯಲ್ಲಿ ಪಾಲು ಕೊಡಿ ಎಂದು 1ನೇ ಪ್ರತಿವಾದಿ ರಮಾಕಾಂತರವರನ್ನು ನಾನು ಕೇಳಿರುತ್ತೇನೆ. ನಾನು ಹೇಳಿದಂತೆ ಪಾಲು ಕೊಡಿ ಎಂದು ಕೇಳದೇ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(( ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು. ))

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.